(ಸಾಕ್ಷಿಯನ್ನು ದಿನಾಂಕಃ 27.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರುಃ ಶ್ರೀ ಹೆಚ್ ಎಸ್ ರವರಿಂದ</u>**

ನಮ್ಮ ಮಾರಾಟಗಾರರು ಯಾರಿಂದ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಪುಟ್ಟಸ್ವಾಮಿಯವರು ಸಿದ್ದೇಗೌಡ ಉಃ ತಮ್ಮೇಗೌಡ ಬಿನ್ ಸಿದ್ದೇಗೌಡ ರವರಿಗೆ ಒಟ್ಟು 8 ಗುಂಟೆ ಜಮೀನು ಸ.ನಂ. 747/8 ರಲ್ಲಿ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಸದರೀ ಜಮೀನನ್ನು ವ್ಯವಸಾನಟೇತರ ಉದ್ದೇಶಕ್ಕಾಗಿ ಆದೇಶ ಮಾಡಿಕೊಂಡು ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೂತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ 8 ಗುಂಟೆ ಜಮೀನನ್ನು 4 ನಿವೇಶನಗಳನ್ನಾಗಿ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು 4 ಜನಕ್ಕೆ ಮಾರಾಟ ಮಾಡಿರುತ್ತ-ರೆಂದು ನನಗೆ ಗೊತ್ತಿರುತ್ತದೆ, ಆದರೆ ಎಷ್ಟು ವಿಸ್ತೀರ್ಣದ ಜಮೀನು ಇತ್ತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶ್ರೀನಿವಾಸರವರಿಗೆ 60 X 35 ಅಡಿ ವಿಸ್ತೀರ್ಣದ ನಿವೇಶನ ಇರುತ್ತದೆಯೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀಯವರಿಗೆ ಇನ್ನೊಂದು 60 X 35 ಅಡಿ ವಿಸ್ತೀರ್ಣದ ನಿವೇಶನ ಇರುತ್ತದೆಯೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶ್ರೀನಿವಾಸ್ ರವರ ಕ್ರಯಪತ್ರದಲ್ಲಿ ರಸ್ತೆ ಯಾವ ದಿಕ್ಕಿನಲ್ಲಿ ಬರುತ್ತದೆಯೆಂದು ನನಗೆ ಗೊತ್ತಿಲ್ಲ. ಪುಟ್ಟ ಸ್ವಾಮಿಯವರು ಶ್ರೀನಿವಾಸರವರಿಗೆ 15 ಅಡಿ ರಸ್ತೆಯನ್ನೂ ಸಹ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ದಾವಾ ಸ್ವತ್ತು ಹಾಗೂ ನಮಗೆ ಸೇರಿದ ಸ್ವತ್ತುಗಳಿಗೆ ಪೂರ್ವ ಮಾತ್ರ ರಸ್ತೆ ಇರುತ್ತದೆ, ಪಶ್ಚಿಮಕ್ಕೆ ರಸ್ತೆ ಇರುವುದಿಲ್ಲ. ನಿ.ಡಿ. 1 ರಲ್ಲಿ ಇರುವ ಪಶ್ಚಿಮದ ರಸ್ತೆ ಪುಟ್ಟಸ್ವಾಮಿಯವರಿಗೆ ಸೇರಿದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು 6 ಅಡಿ ರಸ್ತೆಯಲ್ಲಿ ಬಿಟ್ಟುಕೊಂಡಿರುವ ಬಗ್ಗೆ ನಮ್ಮ ಕ್ರಯಪತ್ರದಲ್ಲಿ ನಮೂದು ಮಾಡಿರುವುದಿಲ್ಲ. ಆಂದರೆ ಮನೆ ಕಟ್ಟುವ ಸಂದರ್ಭದಲ್ಲಿ 6 ಅಡಿ ಜಾಗವನ್ನು ಬಿಟ್ಟುಕೊಂಡಿರುತ್ತೇವೆ. ನಿ,ಪಿ. 5 ರಲ್ಲಿ ಸ.ನಂ. 747/13 ರಲ್ಲಿ 10 ಗುಂಟೆ ಹಿಡುವಳಿ ಜಮೀನು ಎಂದು ನಮೂದು ಇರುತ್ತದೆಯೆಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಹಿಸ್ಸಾ ಟಿಪ್ಪಣಿಯನ್ನು ನಾನು ನೋಡಿರುವುದಿಲ್ಲ. ನಿ.ಡಿ. 5 ರ ಪ್ರಕಾರ 71 X 36 ಅಡಿ ನಿವೇಶನ

ನಮ್ಮದಾಗಿರುತ್ತದೆ. ನಿ.ಡಿ. 1 ನ್ನು ಹೆಚ್ಚಿನ ವಿಸ್ತೀರ್ಣಕ್ಕೆ ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇ ಓ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ ಮದ್ದೂರು.